ಕರ್ನಾಟಕ ಕರಾವಳಿಗೆ ತನ್ನದೇ ಆದ ಸಾಂಸ್ಕೃತಿಕ ಅಸ್ಮಿತೆ ಇದೆ. ಒಂದರ್ಥದಲ್ಲಿ ಇದು ಅನಾದಿ ಕಾಲದಿಂದಲೂ ಪ್ರಕೃತಿದತ್ತವಾಗಿ ಒದಗಿಬಂದದ್ದು ಎನ್ನಬಹುದು. ತುಳುನಾಡು ಎಂಬುದಾಗಿ ಜನಪ್ರಿಯವಾಗಿರುವ ಈ ಪ್ರದೇಶಕ್ಕೆ ಪರಶುರಾಮ ಸೃಷ್ಟಿಯ ತಾಣ ಎಂಬ ಪ್ರತೀತಿಯೂ ಇದೆ. ಇಲ್ಲಿನ ಮಣ್ಣಿನ ಗುಣದಲ್ಲಿಯೇ ಸಾಂಸ್ಕೃತಿಕ ಅನನ್ಯತೆ ಅಡಗಿದೆ. ಕರ್ನಾಟಕದ ಇತರೆಡೆಗಳಿಗೆ ಹೋಲಿಸಿದರೆ ಕರಾವಳಿಯ ಪರಿಸರದಲ್ಲಿ ಗುರುತಿಸಬಹುದಾದ ಸಂಸ್ಕೃತಿಯ ಚಿತ್ತಾರ ತುಸು ವಿಶಿಷ್ಟವಾದುದು. ಯಕ್ಷಗಾನ, ಭೂತಾರಾಧನೆ, ನಾಗಮಂಡಲ, ಕಂಬಳ, ಕೋಳಿ ಅಂಕ, ಕಾಡ್ಯನಾಟ, ಹೂವಿನಕೋಲು ಮೊದಲಾದ ಸಾಂಸ್ಕೃತಿಕ ಗುರುತುಗಳು ಇಲ್ಲಿನ ಜನಜೀವನದೊಂದಿಗೆ ಹಾಸುಹೊಕ್ಕಾಗಿವೆ.

ಪ್ರಸ್ತುತ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಉಪಕುಲಸಚಿವರಾಗಿರುವ ಶ್ರೀ ಪ್ರಭಾಕರ ನೀರ್‌ಮಾರ್ಗ ಅವರು ಕಳೆದ ಎರಡು ಮೂರು ದಶಕಗಳಿಂದ ಆಧುನಿಕ ಕನ್ನಡ ಕಾದಂಬರಿಗೆ ತಮ್ಮದೇ ರೀತಿಯಲ್ಲಿ ವಿಶಿಷ್ಟ ಕೊಡುಗೆ ನೀಡುತ್ತ ಬಂದವರು. ಇವರ ಲೇಖನಿಯಿಂದ ಹರಿದುಬಂದ ಸುಮಾರು ಇಪ್ಪತ್ತು ಕಾದಂಬರಿಗಳು ಕರಾವಳಿಯ ಸಾಂಸ್ಕೃತಿಕ ಬಹುತ್ವವನ್ನು ಹಲವು ವಿನ್ಯಾಸಗಳ ಮೂಲಕ ಪ್ರಕಟಗೊಳಿಸಿವೆ. ಇವರ ಬಹುತೇಕ ಬರಹಗಳು ಶಾಸ್ತ್ರೀಯ ಅನ್ನುವ ನಿರ್ದಿಷ್ಟ ಚೌಕಟ್ಟಿಗೆ ಒಳಪಡದೆ ಕರಾವಳಿಯ ಮಣ್ಣಿನ ಗುಣವನ್ನು ಹೊರಸೂಸಿವೆ.

ಪ್ರಭಾಕರ ಅವರು 1980ರ ದಶಕದಿ0ದೀಚೆಗೆ ತನ್ನ ಬರವಣಿಗೆಯ ಕ್ರಿಯಾಚರಣೆಯ ಮೂಲಕ ಕರಾವಳಿ ಸ0ಸ್ಕೃತಿಯ ಗುರುತುಗಳನ್ನು ಪ್ರಕಟಪಡಿಸುತ್ತ ಬ0ದಿದ್ದಾರೆ. ಇಲ್ಲಿನ ಜನಪದರ ಬಹುಮುಖಿ ಜೀವನಕ್ರಮ, ಇವರ ಕಾದ0ಬರಿಗಳ ಕೇ0ದ್ರವನ್ನು ಆವರಿಸಿಕೊ0ಡಿದೆ. ಕರಾವಳಿಯ ನಿಸರ್ಗ ಮತ್ತು ಸಂಸ್ಕೃತಿಯ ನಡುವಿನ ಸಮನ್ವಯವನ್ನು ಮುಖ್ಯವಾಗಿ ಕನ್ನಡದ ಓದುಗರಿಗೆ ತಳಮಟ್ಟದಿಂದ ಪರಿಚಯಿಸುವ ಪ್ರಾಮಾಣಿಕ ಪ್ರಯತ್ನ ಇವರ ಬಹುಪಾಲು ಕಥನಗಳ ಕೇ0ದ್ರ ಕಾಳಜಿಯಾಗಿದೆ.

ಕರಾವಳಿಯ ಜನಜೀವನ ಮತ್ತು ಇಲ್ಲಿನ ಸಾಂಸ್ಕೃತಿಕ ಬಹುತ್ವವನ್ನು ಬಿಂಬಿಸುವ ಕಾದಂಬರಿಗಳ ಸ್ವರೂಪವನ್ನು ಹಿನ್ನೆಲೆಯಾಗಿರಿಸಿಕೊಂಡು ಪ್ರಭಾಕರ ನೀರ್‌ಮಾರ್ಗರ ಪ್ರಾತಿನಿಧಿಕ ಕಾದಂಬರಿಗಳನ್ನು ಮರುಓದಿಗೆ ಒಳಪಡಿಸುವ ಹಿನ್ನೆಲೆಯಲ್ಲಿ 'ಕರ್ನಾಟಕ ಕರಾವಳಿಯ ಸಾಂಸ್ಕೃತಿಕ ಬಹುತ್ವ ಮತ್ತು ಪ್ರಭಾಕರ ನೀರ್‌ಮಾರ್ಗರ ಕಾದಂಬರಿಗಳು' ಎಂಬ ವಿಷಯದ ಕುರಿತಂತೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಆಯೋಜಿಸಲಾಗಿದೆ. ನೀರ್‌ಮಾರ್ಗರ ಮಹತ್ವದ ಕಾದಂಬರಿಗಳನ್ನು ಕೇಂದ್ರವಾಗಿರಿಸಿಕೊಂಡು ಕರಾವಳಿಯ ಸಾಂಸ್ಕೃತಿಕ ವೈವಿಧ್ಯವನ್ನು ವಿಭಿನ್ನ ತಾತ್ವಿಕ ಮತ್ತು ಸೈದ್ಧಾಂತಿಕ ಚೌಕಟ್ಟುಗಳ ನೆಲೆಯಿಂದ ಗ್ರಹಿಸುವ ಮತ್ತು ಕರಾವಳಿಯ ಕಥನಗಳಲ್ಲಿ ಇದರ ಅಸ್ತಿತ್ವವನ್ನು ಶೋಧಿಸುವ ಕಾಳಜಿಯೊಂದಿಗೆ ಈ ವಿಚಾರ ಸಂಕಿರಣ ಮುಕ್ತ ಸಂವಾದಕ್ಕೆ ವೇದಿಕೆ ಕಲ್ಪಿಸಲಿದೆ.

**ಪಾದುವ ಕಾಲೇಜು, ಮಂಗಳೂರು**
ಕದ್ರಿ ಹಿಲ್ಸ್, ನಂತೂರು, ಮಂಗಳೂರು - 575004.
ಹಾಗೂ
**ಸಾಹಿತ್ಯಾಸಕ್ತರ ಬಳಗ,**
ಮಂಗಳೂರು, ದ.ಕ

# ರಾಜ್ಯ ಮಟ್ಟದ ವಿಚಾರ ಸಂಕಿರಣ 2016

## ಕರ್ನಾಟಕ ಕರಾವಳಿಯ ಸಾಂಸ್ಕ್ರತಿಕ ಬಹುತ್ವ ನೀರ್‌ಮಾರ್ಗರ ಕಾದಂಬರಿಗಳಲ್ಲಿ

09.04.2016ರಂದು ಶನಿವಾರ
ಸ್ಥಳ : ಪಾದುವ ಕಾಲೇಜು ಸಭಾಂಗಣ

ಸಾಂಸ್ಕೃತಿಕ ಹಾಗೂ ಸಾಹಿತ್ಯಪ್ರಿಯರಿಗೆ
ಸ್ವಾಗತ ಬಯಸುವ

ಪ್ರಾಂಶುಪಾಲರು
ಪಾದುವ ಕಾಲೇಜು

ಅಧ್ಯಕ್ಷರು ಹಾಗೂ ಸದಸ್ಯರು
ಸಾಹಿತ್ಯಾಸಕ್ತರ ಬಳಗ

09.04.2016 ಶನಿವಾರ
ಬೆಳಗ್ಗೆ : 9.30 ಕ್ಕೆ

## ಉದ್ಘಾಟನಾ ಸಂಭ್ರಮ

ಅಧ್ಯಕ್ಷತೆ :
**ರೆ. ಫಾ. ಅಂಟನಿ ಸೆರಾವೊ**
ಸಂಚಾಲಕರು
ಪಾದುವ ಶಿಕ್ಷಣ ಸಂಸ್ಥೆಗಳು

ಉದ್ಘಾಟಕರು :
**ಶ್ರೀ ಬಿ. ರಮಾನಾಥ ರೈ**
ಸನ್ಮಾನ್ಯ ಅರಣ್ಯ ಸಚಿವರು ಹಾಗೂ
ದ.ಕ ಜಿಲ್ಲಾ ಉಸ್ತುವಾರಿ ಸಚಿವರು
ಕರ್ನಾಟಕ ರಾಜ್ಯ ಸರಕಾರ

ಕೃತಿ ಬಿಡುಗಡೆ :
**ಪ್ರೊ. ಕೆ. ಅಭಯ ಕುಮಾರ್**
ಪ್ರಾಧ್ಯಾಪಕರು ಹಾಗೂ ಚಿಂತಕರು
ಕನ್ನಡ ಸ್ನಾತಕೋತ್ತರ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ

ಅತಿಥಿಗಳು :
**ಶ್ರೀಮತಿ ಜಾನಕಿ ಬ್ರಹ್ಮಾವರ್**
ಅಧ್ಯಕ್ಷರು
ಕರ್ನಾಟಕ ರಾಜ್ಯ ತುಳು ಸಾಹಿತ್ಯ ಅಕಾಡೆಮಿ

**ಡಾ. ರಾಬರ್ಟ್ ಜೋಸ್**
ಮುಖ್ಯಸ್ಥರು ಹಾಗೂ ಸಹ ಪ್ರಾಧ್ಯಾಪಕರು
ಶ್ರೀ ಕೃಷ್ಣ ದೇವರಾಯ ವಿಶ್ವವಿದ್ಯಾನಿಲಯ
ಬಳ್ಳಾರಿ

09.04.2016 ಶನಿವಾರ
ಅಪರಾಹ್ನ : 4.00 ಕ್ಕೆ

## ವಿಚಾರ ಸಂಕಿರಣದ ಸಮಾರೋಪ ಸಮಾರಂಭ

ಅಧ್ಯಕ್ಷತೆ :
**ರೆ. ಫಾ ಅಲ್ವಿನ್ ಸೆರಾವೋ**
ಪ್ರಾಂಶುಪಾಲರು,
ಪಾದುವ ಕಾಲೇಜು.

ಅತಿಥಿಗಳು :
**ಶ್ರೀ ಆರ್. ಶ್ರೀಕರ್ ಪ್ರಭು**
ಶ್ರೀನಿಧಿ ಎಸೋಸಿಯೇಟ್ಸ್,
ಮಂಗಳೂರು.

**ಶ್ರೀ ಶ್ರೀನಾಥ್ ಉಜಿರೆ**
ಪ್ರಾಧ್ಯಾಪಕರು,
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು,
ಉಜಿರೆ

**ಶ್ರೀ ಪ್ರತಾಪ್‌ಚಂದ್ರ ಹಳ್ನಾಡ್**
ಉಪನ್ಯಾಸಕರು,
ಶ್ರೀ ಶಾರದಾ ಕಾಲೇಜು,
ಬಸ್ರೂರು.

**ಡಾ. ಕಿಶೋರ್ ಕುಮಾರ್ ಶೇಣಿ**
ಪ್ರಾಂಶುಪಾಲರು
ಶ್ರೀ ರಾಮಕೃಷ್ಣ ಪದವಿಪೂರ್ವ ಕಾಲೇಜು,
ಮಂಗಳೂರು

# STATE LEVEL SEMINAR ON KARNATAKA KARAVALIYA SAMSKRATHIKA BAHUTHVA NIRMARGA KADAMBARIYALI



Seminar was organised by Kannada sanga at Padua College of commerce and management auditorium. The dignitaries on the dias were Chief guest Abhaya Kumar, lecturer Mangalore university, Janaki Bramhavar, Mr. Robert José Balari, Rev. Fr. Alwin Serrao,Principal of Padua college of commerce and management.

Rev. Fr. Alwin Serrao welcomed the gathering. Mr. Roshan Santhumayor led the programme and Mr. Kishore Kumar thanked the guest. There was a book release "Tharikita" by Abhay Kumar lecturer of Mangalore University. The seminar was conducted in order to motivate the students to read the books for this generation.

Principal
Padua College of Commerce and Management
Nanthur, Mangalore - 575 004